ಹನಾಯ್ ವೈದ್ಯಕೀಯ ಕಾಲೇಜು, ಹನಾಯ್ ರಾಷ್ಟ್ರೀಯ ವಿವಿ, ಹನಾಯ್ ಲಲಿತ ಕಲೆಗಳ ಕಾಲೇಜು ಮತ್ತು ವಿಯೆಟ್ನಾಂ ರಾಷ್ಟ್ರೀಯ ವಿ.ವಿ. ಇಲ್ಲಿ ತಲೆಯೆತ್ತಿದವು.

ಹನಾಯ್ ಅನ್ನು ದೇಶದ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯುವರು. ಹೋನ್ ಕೀಮ್ ಸರೋವರ, ಸಾಹಿತ್ಯದ ದೇವಾಲಯ (ವಾನ್ ಮಿಯು), ಒಂಟಿ ಕಂಬದ ಪಗೋಡ, ಧ್ವಜ ಸ್ತಂಭ, ಹೋ ಚಿ ಮಿನ್ ಸ್ಮಾರಕ, ರಾಷ್ಟ್ರೀಯ ವಸ್ತು ಸಂಗ್ರಹಾಲಯ, ಇಲ್ಲಿನ ಪ್ರಮುಖ ಪ್ರವಾಸಿ ಸ್ಥಳಗಳು. ಹನಾಯ್‌ನಲ್ಲಿ 'ನೋಯ್ ಬಾ' ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ.

ಊರ ಮಧ್ಯೆ ಇರುವ 'ಸೋಫಿಟೆಲ್' ಎಂಬ ಫ್ರೆಂಚ್ ವಾಸ್ತುಶೈಲಿಯಲ್ಲಿ ನಿರ್ಮಾಣವಾದ ಹೋಟೆಲ್ ಇದೆ. ಇದು ನೂರು ವರ್ಷ ಹಳೆಯದು. ಇದಕ್ಕೆ ಮುಂಚೆ ಬೇರೆ ಹೆಸರಿತ್ತು. ಸೋಫಿಟೆಲ್ ಕಂಪನಿ ಕೊಂಡುಕೊಂಡ ಮೇಲೆ ಈ ಹೆಸರು ಬಂದಿದೆ.

ಈ ನಗರದಲ್ಲಿ ಕಂಡು ಬರುವ ಒಂದು ಕುತೂಹಲಕಾರಿ ಸಂಗತಿಯೆಂದರೆ, ಮನೆಗಳು ಎತ್ತರವಾಗಿಯೂ ತುಂಬಾ ಕಿರಿದಾಗಿಯೂ ಇವೆ. ಇಲ್ಲಿ ಆಸ್ತಿ ತೆರಿಗೆಯು ಕಟ್ಟಡದ ಅಗಲವನ್ನು ಆಧರಿಸಿದೆ. ಈ ವಿಶಿಷ್ಟತೆಯಿಂದ ಈ ಮನೆಗಳಿಗೆ 'ಟ್ಯೂಬ್ ಹೌಸಸ್' ಎಂದು ಹೆಸರು. 19ನೇ ಶತಮಾನದಲ್ಲಿ ಫ್ರೆಂಚರು ಮಾಡಿರುವ ತೆರಿಗೆ ಕಾನೂನಿದು. 2010ರಲ್ಲಿ ಹನಾಯ್ ನಗರ ತನ್ನ ಒಂದು ಸಾವಿರ ವರ್ಷದ ಜನ್ಮದಿನ ಆಚರಿಸಿಕೊಂಡಿತು. ಆ ಸಂದರ್ಭದಲ್ಲಿ ಈ ನಗರದಲ್ಲಿ ಒಂದೆಡೆ 6.5 ಕಿ.ಮೀ. ಉದ್ದದ ರಸ್ತೆ ಬದಿಯ ಗೋಡೆಗೆ ಮೊಜಾಯಿಕ್ ಸೆರಾಮಿಕ್ ಮೂಲಕ ವಿವಿಧ ಚಿತ್ತಾರಗಳನ್ನು ರಚಿಸಲಾಯಿತು. ದೇಶದ ಇತಿಹಾಸವನ್ನು ಬಿಂಬಿಸುವ ಚಿತ್ರಗಳನ್ನು ಮೊಜಾಯಿಕ್ ಮೂಲಕ ಮಾಡಿರುವ ಈ ಮ್ಯೂರಲ್ ಕಲೆಯು ವಿಶ್ವದ ಅತಿ ದೊಡ್ಡ ಸೆರಾಮಿಕ್ ಮೊಜಾಯಿಕ್ ಎಂದು ಗಿನ್ನಿಸ್ ಬುಕ್‌ನಲ್ಲಿ ಸ್ಥಾನ ಪಡೆದುಕೊಂಡಿದೆ.

## ಹೋನ್ ಕೀಮ್ ಸರೋವರ

ಹನಾಯ್ ನಗರದ ಮಧ್ಯೆ ಇರುವ ವಿಶಾಲವಾದ ಹೋನ್ ಕೀಮ್ ಸರೋವರದಲ್ಲಿ ಅಪರೂಪದ ಆಮೆಗಳಿವೆ. ಬೌದ್ಧ ಧರ್ಮೀಯರಿಗೆ ಆಮೆ ಪವಿತ್ರವಾದದ್ದು. ಹಾಗಾಗಿ ಈ ಸರೋವರವು ವಿಯೆಟ್ನಾಮಿನ ಜನರ ಪವಿತ್ರ ಸ್ಥಳ. ಸರೋವರದ ನಡುವೆ 'ಟರ್ಟಲ್ ಟವರ್' (ಆಮೆ ಗೋಪುರ) ಎಂದು ಕರೆಯುವ ಪಗೋಡ ಇದೆ. ಸರೋವರದ ಮತ್ತೊಂದು ಕಡೆ 13ನೇ ಶತಮಾನದಲ್ಲಿ ಮಂಗೋಲರನ್ನು ಸೋಲಿಸಿದ್ದ ನಾಯಕ ಟ್ರಾನ್ ಹುಂಗ್ ದಾವೋ ನೆನಪಿನಲ್ಲಿ ನಿರ್ಮಿಸಿರುವ 'ಗೊಕ್ ಸೊನ್' (Ngoc Son Temple) ದೇವಾಲಯವಿದೆ. ಅಲ್ಲಿಗೆ ಹೋಗಲು 'ದಿ ಹ್ಯೂ ಬ್ರಿಡ್ಜ್' ಎಂದು ಕರೆಯುವ ಕೆಂಬಣ್ಣದ ಸೇತುವೆ ಇದೆ. ಕತ್ತಾಲಾದಾಗ ಈ ಸೇತುವೆ ನೋಡಲು ಬಲು ಚೆನ್ನ. ಈ ಸರೋವರದ ಹೆಸರು 'ಹೋನ್ ಕೀಮ್', ಅಂದರೆ 'ದ ಲೇಕ್ ಆಫ್ ಸ್ವೋರ್ಡ್ ರಿಟರ್ನ್' (ಖಡ್ಗ ಹಿಂದಿರುಗಿಸಿದ ಸರೋವರ) ಎಂಬರ್ಥ. ಹದಿನೈದನೇ ಶತಮಾನದಲ್ಲಿ ಈ ಪ್ರದೇಶದ ಅರಸ ಲೀ ಲೊಯ್ ಬಳಿ ದೇವರು ವರವಾಗಿ ನೀಡಿದ್ದ ಖಡ್ಗವಿತ್ತಂತೆ. ಅದರ ನೆರವಿನಿಂದ ಆತ ಹಲವು ಯುದ್ಧಗಳಲ್ಲಿ ಜಯಗಳಿಸಿದ್ದನಂತೆ. ಈ ಸರೋವರದಲ್ಲಿ ಚಿನ್ನದ ಆಮೆಯ ರೂಪದಲ್ಲಿ ಬಂದ ದೈವ 'ಖಡ್ಗದ ಕೆಲಸ ಮುಗಿದಿದೆ, ಹಿಂದಿರುಗಿಸು' ಎಂದು ಆಜ್ಞಾಪಿಸಿತಂತೆ. ಖಡ್ಗವನ್ನು ಹಿಂತಿರುಗಿಸಿದ ಅರಸ, ಅದರ ಸವಿನೆನಪಿಗೆ ಸರೋವರವನ್ನು 'ಹೋನ್ ಕೀಮ್' ಎಂದು ಹೆಸರಿಸಿದನೆಂದು ಸ್ಥಳೀಯರು ಹೇಳುತ್ತಾರೆ.

## ಗಯಾದ ಬೋಧಿ ನಂಟು

ಹನಾಯ್ ನಗರದ ಮಧ್ಯೆ ಇರುವ ದೊಡ್ಡ ಸರೋವರದಲ್ಲಿ ಟ್ರಾನ್ ಕೋಕ್ ಪಗೋಡ ನಿರ್ಮಿಸಲಾಗಿದೆ. ಟ್ರಾನ್ ಕೋಕ್ ಪಗೋಡ ಸುಮಾರು ನೂರು ಮೀಟರ್ ಎತ್ತರವಿದೆ. ಗೋಪುರದ ಸುತ್ತಲೂ ಚಿಕ್ಕಚಿಕ್ಕ ಗೂಡುಗಳನ್ನು ಮಾಡಿ ಅದರಲ್ಲಿ ಬುದ್ಧನ ಚಿಕ್ಕಚಿಕ್ಕ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಒಂದು ಕಡೆ ಸೇತುವೆ ಮೂಲಕ ಇದಕ್ಕೆ ಸಂಪರ್ಕ ಕಲ್ಪಿಸಲಾಗಿದೆ.

1959ರಲ್ಲಿ ಭಾರತದ ಅಧ್ಯಕ್ಷರಾಗಿದ್ದ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಇಲ್ಲಿಗೆ ಭೇಟಿ ನೀಡಿದಾಗ ಬೋಧಗಯಾದಿಂದ ತಂದ ಬೋಧಿವೃಕ್ಷದ ತುಂಡನ್ನು ಇಲ್ಲಿ ನೆಟ್ಟಿದ್ದರು. ಅದೀಗ ಬೃಹತ್ ಮರವಾಗಿ ಬೆಳೆದಿದೆ. ಆ ಮರವನ್ನು ಭಕ್ತಿಭಾವದಿಂದ ಪೂಜಿಸುತ್ತಾರೆ.

## ಒಂಟಿ ಕಂಬದ ಪಗೋಡ

ಒನ್ ಪಿಲ್ಲರ್ ಪಗೋಡ ಅಥವಾ ಒಂಟಿ ಕಂಬದ ಪಗೋಡ ಹೋ ಚಿ ಮಿನ್ ಮನೆಯ ಆವರಣದಲ್ಲಿದೆ. ಇಲ್ಲಿ ತಾವರೆಯ ಮೇಲೆ ಪದ್ಮಾಸನದಲ್ಲಿ ಶಾಂತವಾಗಿ ಕುಳಿತ ಬುದ್ಧ ಇದ್ದಾನೆ. ಹನ್ನೊಂದನೇ ಶತಮಾನದಲ್ಲಿ ನಿರ್ಮಾಣವಾದ ಈ ದೇಗುಲವನ್ನು ಆಗಿನ ರಾಜ ಲಿ ಥಾಯಿ ಟೊಂಗ ನಿರ್ಮಿಸಿದ್ದಾನೆ. ಮಕ್ಕಳಿಲ್ಲದೆ ಪರಿತಪಿಸುತ್ತಿದ್ದ ಅರಸನಿಗೆ ಕನಸಿನಲ್ಲಿ ಬೋಧಿಸತ್ವ ಅವಲೋಕಿತೇಶ್ವರ ಬಂದು ಮಗುವನ್ನು ಕರುಣಿಸಿದನಂತೆ. ಅದಕ್ಕಾಗಿ ಇಲ್ಲಿ ಪಗೋಡ ನಿರ್ಮಿಸಿದ್ದು, ಎಂಟು ಕೈಗಳ ಬಂಗಾರಬಣ್ಣದ ಸ್ತ್ರೀರೂಪದ ಬುದ್ಧ ಇಲ್ಲಿ ಫಲದಾಯಿಯಾಗಿ, ಕಾಮಿತ ಫಲಕೊಡುವ ದೇವರಾಗಿರುವನು. ಸಂತಾನಪ್ರಾಪ್ತಿಗಾಗಿ ಜನರು ಇಲ್ಲಿ ಪೂಜೆ ಸಲ್ಲಿಸುವರು. ಪ್ರತಿವರ್ಷ ಇಲ್ಲಿ ಬುದ್ಧನ ಗೌರವಾರ್ಥ ವೇಸಕ್ ಹಬ್ಬ ನಡೆಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in

### ಸೈಕಲ್ ರಿಕ್ಷಾ 'ಸೈಕ್ಲೊ'

ಸೈಕ್ಲೊ – ಇದೊಂದು ರೀತಿಯ ಸೈಕಲ್ ರಿಕ್ಷಾ. ನಮ್ಮಲ್ಲಾದರೆ ಸೈಕಲ್ ರಿಕ್ಷಾದಲ್ಲಿ ತುಳಿಯುವವ ಮುಂದೆ ಇದ್ದರೆ, ಈ ಸೈಕ್ಲೊದಲ್ಲಿ ತುಳಿಯುವವ ಹಿಂದೆ ಇದ್ದು, ಕುಳಿತುಕೊಳ್ಳುವ ಪ್ರಯಾಣಿಕರು ಮುಂದೆ ಇರುತ್ತಾರೆ. ಇಬ್ಬರು ಕುಳಿತು ಪ್ರಯಾಣಿಸಬಹುದಾದ ಸೈಕ್ಲೊದಲ್ಲಿ ಕುಳಿತಾಗ ಚಾಲಕ ನಮಗೆ ಅಡ್ಡವಿರುವುದಿಲ್ಲವಾದ್ದರಿಂದ ಸುತ್ತಮುತ್ತಲಿನ ದೃಶ್ಯವನ್ನು ಚೆನ್ನಾಗಿ ವೀಕ್ಷಿಸಬಹುದು. ಪ್ರವಾಸಿಗರು ಸೈಕ್ಲೊದಲ್ಲಿ ಕುಳಿತು ಪೇಟೆಯಲ್ಲಿ ಸುತ್ತಾಡಿ, ನಗರದಲ್ಲಿನ ಹೂವಿನ ಮಾರಾಟ, ವಿವಿಧ ಅಂಗಡಿಗಳು, ವಾಹನ ದಟ್ಟಣೆ, ಹಣ್ಣುಗಳು, ಕಾಗದ ಮತ್ತು ಪ್ಲಾಸ್ಟಿಕ್‌ನಿಂದ ಮಾಡಿರುವ ತೂಗುದೀಪಗಳು, ಚಪ್ಪಲಿ ಬೂಟುಗಳು, ಲ್ಯಾಕರ್ ಕಲಾಕೃತಿಗಳು, ಮುಖವಾಡಗಳು, ಚರ್ಮದಿಂದ ತಯಾರಾದ ವಸ್ತುಗಳು, ಹೋಟೆಲುಗಳು, ಪೇಂಟಿಂಗ್‌ಗಳು, ಉದ್ಯಾನವನ, ರಸ್ತೆ ಬದಿಯ ತಿಂಡಿ ತಿನಿಸುಗಳು, ಒಟ್ಟಾರೆ ಹೊಳೆ ಹೊಳೆಯುವ ಹೊನ್ನಗಂಬಳಿ ಹೊದ್ದ ಹನಾಯ್ ನೋಡಬಹುದಾಗಿದೆ.

